<u>ದಿನಾಂಕಃ **16-07-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ಶ್ರೀ ಪಿ.ಟಿ.ಡಿ. ವಕೀಲರಿಂದಃ</u>

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ಪ್ರಮಾಣಪತ್ರದಲ್ಲಿ ಬರೆದ ವಿಚಾರಗಳು ಸತ್ಯವಾಗಿರುತ್ತದೆ. ನಾನು ಮೂಲತಃ ಸವದತ್ತಿಯವರು. ನಮ್ಮ ಕುಟುಂಬದ ಹಿರಿಯರು ಈಗಲೂ ಸಹ ಸವದತ್ತಿಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. ನಾನು ಕೊಪ್ಪಕ್ಕೆ ಎಂಟು ವರ್ಷದ ಮಗು ಇದ್ದಾಗ ಬಂದಿರುತ್ತೇನೆ. ನಮ್ಮ ಅಪ್ಪನ ಹೆಸರು ಸಿದ್ದಪ್ಪ, ಅಮ್ಮನ ಹೆಸರು ಪಾರ್ವತಿ. ನಾವು ಕೊಪ್ಪಕ್ಕೆ ಬಂದಾಗ ಬಾಡಿಗೆ ಮನೆಯಲ್ಲಿ ವಾಸವಿದ್ದೆವು. ಅಮ್ಮಡಿ ಎಸ್ಟೇಟಿಗೆ ನಮ್ಮ ತಂದೆ ತಾಯಿ ಕೆಲಸಕ್ಕೆ ಹೋಗುತ್ತಿದ್ದರು. ನಾನು ಸಹ ಅಮ್ಮಡಿ ಎಸ್ಟೇಟಿಗೆ ಕೆಲಸಕ್ಕೆ ಹೋಗುತ್ತಿದ್ದೇನೆ. ನಾನು ವಿಧ್ಯಾಭ್ಯಾಸ ಮಾಡಿರುವುದಿಲ್ಲ. ನನ್ನ ಕುಟುಂಬದವರು ಕೌರಿ ಪ್ರಕಾಶ್ ರವರ ಎಸ್ಟೇಟ್ ನಲ್ಲಿ ಕೆಲಸ ಮಾಡುತ್ತಿದ್ದೆವು. ಕೌರಿ ಪ್ರಕಾಶ್ ರವರ ಎಸ್ಟೇಟ್ ಕೆಲಸ ಮಾಡುವಾಗ ನಮಗೆ ಅವರ ಜಾಗದಲ್ಲಿ ವಸತಿಗೆ ಜಾಗ ಕೊಟ್ಟಿದ್ದರು. ಸದರಿ ಎಸ್ಟೇಟ್ ನಲ್ಲಿ ಆರು ವರ್ಷಗಳ ಕಾಲ ಕೆಲಸ ಮಾಡಿರುತ್ತೇವೆ. ಸದರಿ ಸಮಯಕ್ಕೆ ನನಗೆ ಮದುವೆಯಾಗಿತ್ತು. ನನ್ನ ಗಂಡ ಮೂಲತಃ ಸವದತ್ತಿಯವರು. ನನ್ನನ್ನು ಮದುವೆ ಮಾಡಿಕೊಟ್ಟಿರುವುದು ಸವದತ್ತಿಗೆ.

2. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ತೋರಿಸಿರುವ ವಿಳಾಸದಲ್ಲಿ ವಾಸವಿರುವ ಬಗ್ಗೆ ದಾಖಲೆಗಳು ಇರುತ್ತವೆ. ನಮ್ಮ ತಂದೆಯ ಅಂತ್ಯ ಸಂಸ್ಕಾರವನ್ನು ಸವದತ್ತಿಯಲ್ಲಿ ಮತ್ತು ನಮ್ಮ ತಾಯಿಯ ಅಂತ್ಯಸಂಸ್ಕಾರವನ್ನು ಕೊಪ್ಪದಲ್ಲಿ ಮಾಡಲಾಗಿರುತ್ತದೆ. ನಾನು ಕೂಲಿ ಕೆಲಸ ಮಾಡುತ್ತೇನೆ. ನಾನು ಖಾಯಂ ಆಗಿ ಮುರುಗೇಶ್ ಎಂಬ ಗಾರೆಯವರ ಬಳಿ ಕೆಲಸಕ್ಕೆ ಹೋಗುತ್ತೇನೆ ಎಂದರೆ ಸರಿಯಲ್ಲ. ನಾವು ಮದುವೆಯಾದ ನಂತರ 8 ವರ್ಷಗಳ ಕಾಲ ಸವದತ್ತಿಯಲ್ಲಿ ವಾಸವಿದ್ದು ಆ ನಂತರ ಇಲ್ಲಿಗೆ ಬಂದಿರುತ್ತೇವೆ. ನಾನು ಸವದತ್ತಿಯಿಂದ ಇಲ್ಲಿಗೆ ಬಂದಾಗ ನನ್ನ ಗಂಡ ನಮ್ಮ ಜೊತೆ ಇಲ್ಲಿಯೇ ಇದ್ದರು. ನಾವು ಇಲ್ಲಿಗೆ ಬಂದಾಗ ಕೊಪ್ಪದ ವಿದ್ಯಾನಗರದ ಬಾಡಿಗೆ ಮನೆಯಲ್ಲಿ ಇದ್ದೆವು. ಸದರಿ ಮನೆ ಮಾಲೀಕರ ಹೆಸರು ನನಗೆ ನೆನಪಿರುವುದಿಲ್ಲ. ವಿದ್ಯಾನಗರದಲ್ಲಿ 4 ವರ್ಷಗಳ ಕಾಲ ವಾಸವಿದ್ದೆವು. ನಂತರ ನಾವು

ಭಾರತ್ ರೈಸ್ ಮಿಲ್ ನ ಜಾಕೀರ್ ಇವರ ಮನೆಯಲ್ಲಿ ಬಾಡಿಗೆಗೆ ಸುಮಾರು ಒಂದೂವರೆ ವರ್ಷಗಳ ಕಾಲ ಇದ್ದೆವು.

2. ನಂತರ ನಾವು ಬಿಂತ್ರುವಳ್ಳಿ ಗ್ರಾಮದ ಅಬ್ಬೀಗದ್ದೆಯ ಸ್ವಂತ ಮನೆಗೆ ಹೋಗಿರುತ್ತೇವೆ. ನಾವು ಮನೆ ಕಟ್ಟಿರುವ ಜಾಗವನ್ನು ಯೋಗೇಂದ್ರ ಶೆಟ್ಟಿ ಇವರ ಕಡೆಯಿಂದ ಕ್ರಯಕ್ಕೆ ಪಡೆದಿರುತ್ತೇವೆ. ಸದರಿ ಆಸ್ತಿಯನ್ನು ಕ್ರಯಕ್ಕೆ ಕೊಂಡ ಬಗ್ಗೆ ದಾಖಲೆಗಳು ನಮ್ಮ ಬಳಿ ಇರುವುದಿಲ್ಲ, ಅವರು ತಮ್ಮ ಬಳಿ ಇಟ್ಟುಕೊಂಡಿದ್ದು ಕೊಡುತ್ತೀನಿ, ಕೊಡುತ್ತೀನಿ ಅಂತ ಹೇಳಿ ತೀರಿಕೊಂಡು ಹೋದರು ಎಂದು ಉತ್ತರಿಸಿರುತ್ತಾರೆ. ನಾನು ಕ್ರಯಕ್ಕೆ ಪಡೆದ ಆಸ್ತಿಯ ದಾಖಲೆಗಳನ್ನು ನೊಂದಾಣಾಧಿಕಾರಿಗಳ ಕಚೇರಿಯಿಂದ ದೃಢೀಕೃತ ಪ್ರತಿ ಪಡೆಯಲು ಪ್ರಯತ್ನಪಟ್ಟಿರುವುದಿಲ್ಲ. ಸದರಿ ಜಾಗವನ್ನು ಕೊಳ್ಳುವ ಕಾಲಕ್ಕೆ ನನ್ನ ಗಂಡ ತೀರಿಕೊಂಡಿದ್ದರು. ನಾವು ಸದರಿ ಜಾಗವನ್ನು 10 ಸಾವಿರಕ್ಕೆ ಖರೀದಿ ಮಾಡಿರುತ್ತೇವೆ. ನಾವು ಸದರಿ ಮನೆ ಕಟ್ಟಲು ಪರವಾನಗಿಯನ್ನು ಪಡೆದುಕೊಂಡಿರುತ್ತೇವೆ. ಆಶ್ರಯ ಯೋಜನೆಯಡಿ ಮನೆ ಕಟ್ಟಬೇಕಾದರೆ ಸಾಗುವಳಿ ಚೀಟಿ ಇರಬೇಕು ಎಂದರೆ ಸಾಕ್ಷಿ ಆವಾಗ ಇರಲಿಲ್ಲ ಎಂದು ಉತ್ತರಿಸಿರುತ್ತಾರೆ.

3. ನನಗೆ 1 ನೇ ಪ್ರತಿವಾದಿ ಸುಮಾರು 15 ವರ್ಷಗಳಿಂದ ಪರಿಚಯ ಇರುತ್ತಾರೆ. ಸದರಿಯವರು ಮದುವೆಯಾಗಿ ಆ ಕಾಲಕ್ಕೆ ಅಲ್ಲಿ ಬಾಡಿಗೆ ಮನೆಗೆ ಬಂದಿದ್ದರು. ನಮ್ಮ ಮನೆಯಿಂದ 1 ನೇ ಪ್ರತಿವಾದಿಯು ಬಾಡಿಗೆಗೆ ಇದ್ದ ಮನೆ 100 ಮೀಟರ್ ದೂರದಲ್ಲಿ ಇತ್ತು. ನನಗೆ 1 ನೇ ಪ್ರತಿವಾದಿ ಕುಟುಂಬದ ಬಗ್ಗೆ ಮಾಹಿತಿ ಇರುತ್ತದೆ. 1 ನೇ ಪ್ರತಿವಾದಿಯ ಹುಟ್ಟೂರು ಯಾವುದು ಎಂದು ಗೊತ್ತಿರುವುದಿಲ್ಲ. ಅವರ ತಂದೆ ತಾಯಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿ ಪರಿಚಯ ಆಗುವುದಕ್ಕಿಂತ ಪೂರ್ವದಲ್ಲಿ ಅವರ ಪೂರ್ವಾಪರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಮ್ಮ ಮನೆ ಎದುರುಗಡೆಯಿಂದ 10 ಅಡಿ ದೂರದಲ್ಲಿ 1 ನೇ ಪ್ರತಿವಾದಿಯ ಮನೆ ಇರುತ್ತದೆ. ನಮ್ಮ ಮನೆ ಯಾವ ಸರ್ವೆ ನಂಬರ್ ನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ 1 ನೇ ಪ್ರತಿವಾದಿಯ ಮನೆ ಯಾವ ಸರ್ವೆ ನಂಬರ್ ನಲ್ಲಿ ಬರುತ್ತದೆ ಎಂಬ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಮ್ಮ ಮನೆಯಿಂದ ದಾವಾ ಆಸ್ತಿ 800 ಮೀಟರ್ ನಿಂದ 1000 ಮೀಟರ್ ದೂರದಲ್ಲಿ ಇರುತ್ತದೆ ಎಂದರೆ ಸರಿಯಲ್ಲ.

4. ನಮ್ಮ ಮನೆಯ ಪೂರ್ವ ದಿಕ್ಕಿಗೆ ಪ್ರತಿವಾದಿಯ ಮನೆ ಬರುತ್ತದೆ. ನಮ್ಮ ಮನೆಯ ಬಲಭಾಗಕ್ಕೆ ಅನುಸೂಯ ಇವರ ಮನೆ, ಎಡಭಾಗಕ್ಕೆ ಧರ್ಮ ಇವರ ಮನೆ ಬರುತ್ತದೆ ಎಂದರೆ ಸರಿ. ಪ್ರತಿವಾದಿ ಕಂದಾಯ ಕಟ್ಟಿದ ಬಗ್ಗೆ ನಾನು ದಾಖಲೆಯನ್ನು ನೋಡಿರುವುದಿಲ್ಲ. ಪ್ರತಿವಾದಿಯು ನಮ್ಮ ಮನೆಯಿಂದ ಒಂದು ಕೀ.ಮೀ. ದೂರದಲ್ಲಿ ವಾಸ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 13 ವರ್ಷಗಳಿಂದ ಅವರು ವಾಸ ಇರುತ್ತಾರೆ ಎಂದು ಉತ್ತರಿಸಿರುತ್ತಾರೆ. ಪ್ರತಿವಾದಿ ವಾಸ ಇರುವ ಮನೆಗೆ ಸರ್ಕಾರದಿಂದ ಹಕ್ಕುಪತ್ರ ಕೊಟ್ಟಿರುವುದಿಲ್ಲ ಸಾಕ್ಷಿ ಮುಂದುವರೆದು ಇನ್ನೂ ಕೆಲವರಿಗೂ ಮತ್ತು ನಮಗೂ ಹಕ್ಕುಪತ್ರ ಕೊಟ್ಟಿಲ್ಲ ಎಂದು ಉತ್ತರಿಸಿರುತ್ತಾರೆ. ನಾವು ಆಶ್ರಯ ಯೋಜನೆಯ ಮನೆಗಳನ್ನು ಬೇರೆಯವರಿಗೆ ಮಾರಾಟ ಮಾಡುತ್ತಿದ್ದಾರೆ ಎಂದು ನಿಡಿ-3 ರ ಪ್ರಕಾರ ಯಾವುದೇ ಅರ್ಜಿಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. ನಾನು ಮತ್ತು 1 ನೇ ಪ್ರತಿವಾದಿ ಮುರುಗೇಶ್ ಮತ್ತು ಗುಂಡಪ್ಪ ಇವರ ಕೈಕೆಳಗೆ ಒಟ್ಟಿಗೆ ಕೆಲಸ ಮಾಡುತ್ತೇವೆ ಎಂದರೆ ಸಾಕ್ಷಿ ಗುಂಡಪ್ಪ ಇವರ ಕೈಕೆಳಗೆ ಕೆಲಸ ಮಾಡುವುದಿಲ್ಲ ಎಂದು ಉತ್ತರಿಸಿರುತ್ತಾರೆ.

5. ದಾವಾ ಆಸ್ತಿಯ ಅಕ್ಕಪಕ್ಕ ಚೆನ್ನಬಸಪ್ಪ ಇವರು ಮನೆ ಇತ್ತು ಅದನ್ನು ಅವರು ಮಾರಾಟ ಮಾಡಿರುತ್ತಾರೆ. ಪಕ್ಕದಲ್ಲಿ ಶಿವಮೊಗ್ಗದವರು ತೆಗೆದುಕೊಂಡಿದ್ದು ಅದನ್ನು ಸಹ ಮಾರಾಟ ಮಾಡಿರುತ್ತಾರೆ. ಪ್ರತಿವಾದಿ ವಾಸವಿರುವ ಮನೆಗೆ ವಿದ್ಯುತ್ ಸಂಪರ್ಕ ಇರುವುದಿಲ್ಲ ಆದರೆ ಸೋಲಾರ್ ಇರುತ್ತದೆ. ಪ್ರತಿವಾದಿ ಹದಿಮೂರು ವರ್ಷಗಳಿಂದ ವಾಸವಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಖಾಲಿ ಸೈಟ್ ನಲ್ಲಿ ಅಕ್ರಮವಾಗಿ ದಾವಾ ಸ್ವತ್ತಿನೊಳಗೆ ಶೆಡ್ ನಿರ್ಮಿಸಿಕೊಂಡು ವಾಸವಾಗಿರತ್ತಾರೆ ಎಂದರೆ ಸರಿಯಲ್ಲ. ಆ ಸಂಬಂಧ ವಾದಿ ಪ್ರತಿವಾದಿಗೆ ನೋಟೀಸ್ ಕಳುಹಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಮಂಗನ ಕಾಡು ಗ್ರಾಮದಲ್ಲಿ ಮನೆ ಇದ್ದು ಅನಧಿಕೃತವಾಗಿ ದಾವಾ ಸ್ವತ್ತಿನಲ್ಲಿ ವಾಸವಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬಾಡಿಗೆ ಮನೆಯಲ್ಲಿ ಇದ್ದವರನ್ನು ಪಂಚಾಯಿತಿಯವರು ಕರೆದುಕೊಂಡು ಬಂದಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಹನುಮಾನ್ ನಗರದಲ್ಲಿ ಪ್ರತಿವಾದಿ ಬಾಡಿಗೆ ಮನೆಯಲ್ಲಿ ವಾಸವಿದ್ದರು ಎಂದರೆ ಸರಿ. ನಾನು, 1 ನೇ ಪ್ರತಿವಾದಿ ಒಬ್ಬ ವ್ಯಕ್ತಿಯ ಕೈಕೆಳಗೆ ಕೆಲಸ ಮಾಡುವುದರಿಂದ

ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ